ಸಲುವಾಗಿ ವಿಷಯವನ್ನು ಸಚಿವ ಸಂಪುಟಕ್ಕೆ ಒಪ್ಪಿಸಿತು. ದಿನಾಂಕ 15–12–1981 ರಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿಷಯ ಮಂಡಿತವಾಗಿದ್ದು ಸಚಿವ ಸಂಪುಟವು ಈ ಪ್ರಕರಣದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳ ಅಭಿಪ್ರಾಯ ಲಾಭ ಪಡೆದ ನಂತರ ತನ್ನ ಮುಂದಿನ ಸಭೆಯಲ್ಲಿ ಪರಿಶೀಲಿಸಬೇಕಾಗಿ ನಿರ್ಣಯಿಸಿತು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಅಭಿಪ್ರಾಯವನ್ನು ಪಡೆದ ನಂತರ ವಿಷಯ ಪುನಃ ಸಚಿವ ಸಂಪುಟ ಸಭೆಯಲ್ಲಿ ಮಂಡಿತವಾಯಿತು. ದಿನಾಂಕ 25–8–1982 ರಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ಸದರಿ ವಿಷಯದಲ್ಲಿ ತೀರ್ಮಾನ ಕೈಗೊಳ್ಳುವುದನ್ನು ಅಕ್ಟೋಬರ್ ತಿಂಗಳ ಅಂತ್ಯದವರೆಗೆ ಮುಂದೂಡುವಂತೆ ನಿರ್ಣಯಿಸಿತು. ಅದೇ ರೀತಿ ಪುನಃ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ದಿನಾಂಕ 13–11–1982 ರಲ್ಲಿನ ಸಭೆಯಲ್ಲಿಈ ಬಗ್ಗೆ ತೀರ್ಮಾನ ಕೈಗೊಳ್ಳುವುದನ್ನು ಡಿಸೆಂಬರ್ 1982 ರ ಅಂತ್ಯದ ವರೆಗೂ ಮುಂದೂಡುವಂತೆ ನಿರ್ಧರಿಸಿತು.

ಪ ಸ್ತುತ ಸರ್ಕಾರವು ದಿನಾಂಕ 4–3–1983 ರಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ಈ ವಿಷಯ ಮಂಡಿಸಲಾಗಿದ್ದು ಜಾಗೃತ ಆಯೋಗ ವಿಚಾರಣೆ ಮಾಡಿದ ಅನೇಕ ವಿಚಾರಣಾ ಪ್ರಕರಣಗಳಲ್ಲಿ ಸರ್ಕಾರಿ ನೌಕರರಿಗೆ ಶಿಕ್ಷೆ ವಿಧಿಸುವುದರ ಬಗ್ಗೆ ಜಾಗೃತ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಕೊಳ್ಳದೇ ಇರುವುದನ್ನು ಗಮನಿಸಿ (ಸರ್ಕಾರದ ಎಲ್ಲಾ ಇಲಾಖೆಗಳಲ್ಲಿರುವ) ಇಂತಹ ಪ್ರಕರಣಗಳನ್ನು ಪರಿಶೀಲಿಸುವ ಬಗ್ಗೆ ಎಂದರೆ ಒಂದೊಂದು ಪ್ರಕರಣದಲ್ಲಿ ಒಂದೊಂದು ನಿರ್ಣಯ ತೆಗೆದುಕೊಳ್ಳುವ ಬದಲು ತತ್ಸಂಬಂಧವಾದ ಪ್ರಕರಣಗಳಲ್ಲಿ ಏಕರೀತಿಯ ನಿರ್ಣಯ ತೆಗೆದುಕೊಳ್ಳುವ ಬಗ್ಗೆ ನಿರ್ಧರಿಸಿತು. ಹಾಗೂ ಹಾಲಿ ಪ್ರಕರಣವನ್ನು, ಮೇಲೆ ಹೇಳುವ ಪ್ರಕರಣಗಳನ್ನು ಸಚಿವ ಸಂಪುಟವು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಸಭೆಯ ಮುಂದೆ ತರುವಂತೆ ನಿರ್ಣಯ ತೆಗೆದುಕೊಂಡಿತು.

(ಇ) ಅಂತಹ ಸಂಗತಿಗಳು ಸರ್ಕಾರದ ಗಮನಕ್ಕೆ ಬಂದಿಲ್ಲ

ವಿಷಯ : ರಾಜ್ಯ ಸರ್ಕಾರದಿಂದ ನಡೆಯುತ್ತಿರುವ ಕಾರ್ಖಾನೆಗಳು.

ಪ್ರ. 137 (103) ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೇ :—

(ಅ) ರಾಜ್ಯ ಸರ್ಕಾರದಿಂದ ನಡೆಯುವ ಕಾರ್ಖಾನೆಗಳ ಸಂಖ್ಯೆ ಎಷ್ಟು; ಇವುಗಳ ಹೆಸರು, ಲಾಭ ಹಾಗೂ ಹಾನಿಗಳ ವಿವರಗಳನ್ನು 1980 ನೇ ಸಾಲಿನಿಂದ 1982 ರವರೆಗೆ ಮಾಹಿತಿ ಒದಗಿಸುವುದು;

(ಆ) ಮೇಲ್ಕಂಡ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ವಿದೇಶಗಳಿಗೆ ಹೋಗಿ ಬಂದವರ ಸಂಖ್ಯೆ ಎಷ್ಟು ಹಾಗೂ ಯಾವ ದೇಶಗಳಿಗೆ ಹಾಗೂ ಅವರು ಮಾಡಿದ ವೆಚ್ಚ ಎಷ್ಟು;

(ಇ) ಮೇಲ್ಕಂಡ ಕಾರ್ಖಾನೆಗಳಿಂದ ಲಾಭಗಳಿಸಿದ ಘಟಕಗಳಿಂದ ಹೋದವರ ಸಂಖ್ಯೆ ಹಾಗೂ ವೆಚ್ಚದ ಮೊತ್ತ ಎಷ್ಟು;

(ಈ) ಹಾನಿಗೊಳಗಾದ ಘಟಕಗಳಿಂದ ಹೋಗಿ ಬಂದವರ ಸಂಖ್ಯೆ ಎಷ್ಟು ಮತ್ತು ವೆಚ್ಚ ಮಾಡಿದ ಹಣವೆಷ್ಟು ; 1980 ರಿಂದ 1982 ರವರೆಗೆ ಮಾಹಿತಿ ಒದಗಿಸುವುದು;

(ಉ) ವಿದೇಶಗಳಿಗೆ ಹೋಗಿ ಬಂದ ಅಧಿಕಾರಿಗಳು ಆಕ್ರಮವಾಗಿ ತಂದ ಸಾಮಾನು ಸಿಕ್ಕಿಕೊಂಡ ಪ್ರಕರಣಗಳು ಎಷ್ಟು, ಹಾಗೂ ಅದರ ಮೌಲ್ಯ ಎಷ್ಟು ?

ವಿಷಯ : ಅರಣ್ಯ ಸಂಪತ್ತನ್ನು ಕಾಪಾಡುವ ಬಗ್ಗೆ.

ಪ್ರ. 138 (161) ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).—ಮಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಮೈಸೂರು, ಕೊಳ್ಳೇಗಾಲ, ಚಾಮರಾಜನಗರ, ಮಂಡ್ಯ, ಬಂಡಿಪುರ, ಕೊಡಗು, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಅರಣ್ಯಗಳಲ್ಲಿರುವ ಹಿಂಸೆ ಪ್ರಾಣಿಗಳ ಅಂದರೆ, ಆನೆ, ಕಾಡುಕೋಣ, ಹುಲಿ, ಹಾವುಗಳ ಸಂಖ್ಯೆ ಎಷ್ಟು ? (ಕಳೆದ ಎರಡು ವರ್ಷಗಳ ಬಗ್ಗೆ ಮಾಹಿತಿ ನೀಡುವುದು).

(ಆ) ಮೇಲ್ಕಂಡ ಅರಣ್ಯಗಳಲ್ಲಿ ಆನೆಗಳನ್ನು ಕೊಂದು ದಂತಗಳನ್ನು ಒಯ್ದು ಪ್ರಕರಣಗಳ ಸಂಖ್ಯೆ ಎಷ್ಟು ? (ಎರಡು ವರ್ಷಗಳ ಮಾಹಿತಿ ಒದಗಿಸುವುದು).

(ಇ) ಇತ್ತೀಚೆಗೆ 6 ತಿಂಗಳ ಒಳಗಾಗಿ ಆನೆಗಳ ಸಂಖ್ಯೆ ಹೆಚ್ಚಾಗಿರುವುದು ನಿಜವೇ ? ಹೆಚ್ಚಾಗಿದ್ದರೆ ಕಾರಣಗಳೇನು ;

(ಈ) ಆಕ್ರಮವಾಗಿ ಅರಣ್ಯ ಸಂಪತ್ತು ನಾಶವಾಗುವುದನ್ನು ತಪ್ಪಿಸುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?